ಕಡೂರು ಡಿಸ್ಟ್ರಿಕ್ಟು.

ತಾರೀಖು 22ನೇ ಡಿಸಂಬರ್ 1886.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ಒಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಜಿಲ್ಲೆ ನಂ.	ಯೂನಿಯನ್ ನಂಬರ್.	ದಸ್ತಾವೇಜು ನಂಬರ್.	ದಸ್ತಾವೇಜು ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿಗೆ ಪಾಸಾದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 / 1884—85	22—5—84	22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಯಕ್ಕೆ ಕೊಟ್ಟಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟರುವದಾಗಿ.
2	ಡಿಟೋ	58 / 1884—85	26—5—84	26—5—84	ತಿರಿಗೂರಲ್ಲಿರುವ ದೇವಾಚಾರ್ಯದ ಜಾತಿ ಹುಲಿಗೌಡನ ಮಗ ನಂಜೇಗೌಡ	ತಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಚ್ಚಯ್ಯನೇರ್ಪೊಗಾರ	ತಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 / 1884—85	22—7—84	23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸನ್ನ ಬೈಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ವೈಕೀ ಕಾಫಿ ಹಿತ್ತು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಯೆ 10 ವರುಷದ ವರಿಗೆ ಇಳಿಭೋಗ್ಯಾಧಿ ಮಾಡಿರುವಂತ್ತೆ.

ಟಿ. ವ್ಯಾಂಡರ್ಲೋ,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೀದಾರ ಬೆಂಗಳೂರು ಬಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ|| 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವ್ತೆ ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈನ್ ಸಾಹೇಬರವರ ರೂಬ್ರುತೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರಿಯವಳ ದೇಣೀದಾರ್ರಾದ 1—2ನೇರ ತರಫ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ತರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವಳನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.